# ಹೊಸ ವರ್ಷದ ಹಾರ್ದಿಕ ಅಭಿನಂದನೆಗಳು – ೨೦೨೩

ಆತ್ಮೀಯ ಬಂಧುಗಳೇ,

ಪ್ರತಿ ವರ್ಷದಂತೆ ಈ ವರ್ಷವೂ ಜನವರಿ ತಿಂಗಳ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದೇವೆ. **'ಭಾರತ ತೀರ್ಥ'** ಎಂಬುದು ಈ ಸಂಚಿಕೆಯ ಶೀರ್ಷಿಕೆಯಾಗಿದೆ. ಸಮಗ್ರ ಭಾರತವರ್ಷ ಎಂಬುದೇ ಒಂದು ತೀರ್ಥಕ್ಷೇತ್ರವಾಗಿದೆ. ಈ ದೇಶದ ಉದ್ದಗಲಕ್ಕೂ ಅಸಂಖ್ಯಾತ ಪುಣ್ಯಕ್ಷೇತ್ರಗಳು ತುಂಬಿವೆ; ಅನೇಕ ದಿವ್ಯನದಿಗಳೂ ಪರ್ವತ, ಕಾನನಗಳೂ ಜನರ ಜೀವನದಲ್ಲಿ ಹಾಸುಹೊಕ್ಕಾಗಿ ನಿಂತಿವೆ. ಜೀವಚೈತನ್ಯದಾಯಕವಾದ ಈ ಕ್ಷೇತ್ರಗಳು ಭಾರತೀಯ ಜನತೆಗೆ ಆಧ್ಯಾತ್ಮಿಕ ಸ್ಫೂರ್ತಿಯನ್ನೂ, ಭಕ್ತಿಭಾವಭರಿತ ಶ್ರದ್ಧೆಗೆ ಶಕ್ತಿಸಂಚಾರವನ್ನೂ ನೀಡುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ತೀರ್ಥ ಕ್ಷೇತ್ರಗಳಿಗೆ ವಿಶೇಷವಾದ ಮಾನ್ಯತೆ ಮತ್ತು ಸ್ಥಾನವಿದೆ. ಇಂಥ ಸಹಸ್ರಾರು ತೀರ್ಥಕ್ಷೇತ್ರಗಳ, ತೀರ್ಥಯಾತ್ರೆಗಳ ವಿಶಿಷ್ಟ ಮಾಹಿತಿಗಳೊಂದಿಗೆ, ಭಕ್ತಜನರು ತೀರ್ಥಯಾತ್ರೆಯಿಂದ ಪಡೆದ ಅನುಭವ ಬರಹಗಳ ಸಂಕಲನ ಇದಾಗಿದೆ. ಆಧುನಿಕ ಆಧ್ಯಾತ್ಮಿಕ ಪುನರುತ್ಥಾನದ ಹರಿಕಾರರೂ, ಅವತಾರವರಿಷ್ಠರೂ ಆದ ಶ್ರೀರಾಮಕೃಷ್ಣರಾಗಲಿ, ಅವರೊಂದಿಗೆ ಲೀಲಾಸಹಾಯಕರಾಗಿ ಧರೆಗಿಳಿದು ಬಂದ ಶ್ರೀಮಾತೆ, ಸ್ವಾಮೀಜಿ ಹಾಗೂ ನೇರ ಶಿಷ್ಯರುಗಳಾಗಲಿ ತೀರ್ಥಯಾತ್ರೆ ಮಾಡುತ್ತ ಆಯಾ ಪುಣ್ಯಕ್ಷೇತ್ರಗಳಲ್ಲಿ ಹೊಮ್ಮಿ ಬಂದ ಆಧ್ಯಾತ್ಮಿಕ ಸ್ಪಂದನದ ನಡುವೆ ಧ್ಯಾನ, ಸಮಾಧಿಗಳಲ್ಲಿ ನಿರತ ರಾದರು. ಈ ಮೂಲಕ ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ಆಯಾ ಕ್ಷೇತ್ರಗಳಿಗೂ ಪಸರಿಸಿದರು. ಅವರ ದರ್ಶನದಿಂದ ಈ ಪುಣ್ಯಕ್ಷೇತ್ರಗಳ ಮಹಿಮೆ ಮತ್ತಷ್ಟು ಉನ್ನತಿಗೇರುವಂತಾಯಿತು. ಹೀಗೆ, ತೀರ್ಥಯಾತ್ರೆಯ ಪರಂಪರೆಗೆ ರಾಮ ಕೃಷ್ಣ ಭಾವಧಾರೆಯಿಂದ ಹೊಸ ಆಧ್ಯಾತ್ಮಿಕ ಸ್ಪರ್ಶವುಂಟಾಗಿದೆ.

ಹಲವು ಮಂದಿ ಸಂನ್ಯಾಸಿಗಳು, ಸಾಧಕರು ಹಾಗೂ ಹೆಸರಾಂತ ಲೇಖಕರು ಈ ವಿಷಯವನ್ನು ಕುರಿತು ಚಿಂತನ ಪ್ರದವಾದ, ಮಾಹಿತಿಪೂರ್ಣವಾದ ಹಾಗೂ ಸ್ಫೂರ್ತಿದಾಯಕವಾದ ಉತ್ತಮ ಲೇಖನಗಳನ್ನು ಬರೆದಿದ್ದಾರೆ. 'ವಿವೇಕ ಪ್ರಭ' ಲೇಖಕರಿಗೆ ಈ ವಿಶೇಷ ಸಂಚಿಕೆ ಆಪ್ಯಾಯಮಾನವಾಗುವುದು ಎಂದು ನಮ್ಮ ನಂಬಿಕೆ.

'ವಿವೇಕಪ್ರಭ' ಪತ್ರಿಕೆಯ ಮೂಲಕ ರಾಮಕೃಷ್ಣ–ವಿವೇಕಾನಂದರ ಭಾವಧಾರೆ ಹಾಗೂ ವೇದಾಂತವನ್ನು ನಾಡಿನ ಜನತೆಗೆ ಬಿತ್ತರಿಸುವಲ್ಲಿ ನಮ್ಮೊಂದಿಗೆ ಕೈಜೋಡಿಸಿರುವ ಎಲ್ಲ ಆಶ್ರಮಗಳಿಗೆ, ಸಂಸ್ಥೆಗಳಿಗೆ, ಸ್ವಯಂಸೇವಕರಿಗೆ, ಬಂಧು ಮಿತ್ರರಿಗೆ, ಸಿಬ್ಬಂದಿ ವರ್ಗದವರಿಗೆ, ಜಾಹೀರಾತುದಾರರಿಗೆ, ಅಚ್ಚುಕಟ್ಟಾಗಿ ಮುದ್ರಿಸುತ್ತಿರುವ ಮುದ್ರಕರಿಗೆ, ಹಾಗೂ ಸಹಕಾರ ನೀಡುತ್ತಿರುವ ಸರಕಾರಿ ಇಲಾಖೆಗಳಿಗೆ ಮತ್ತು ಅಂಚೆ ಕಛೇರಿಯವರಿಗೆ ಪ್ರೀತಿಯ ಧನ್ಯವಾದಗಳು. ಈ ಪತ್ರಿಕೆಯನ್ನು ಎಲ್ಲರ ಬಳಿಗೆ ತಲುಪಿಸುವಲ್ಲಿ ತಮ್ಮೆಲ್ಲರ ಸಹಕಾರ ಎಂದೆಂದೂ ಇರಲಿ ಎಂದು ಆಶಿಸುತ್ತೇವೆ.

ಜೈ ಶ್ರೀರಾಮಕೃಷ್ಣ!

ಭಗವತ್ಸೇವೆಯಲ್ಲಿ ತಮ್ಮ
ಸ್ವಾಮಿ ಮುಕ್ತಿದಾನಂದ
ವ್ಯವಸ್ಥಾಪಕ ಸಂಪಾದಕರು